**ದಿನಾಂಕಃ 13-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ:-**

10. ಅಭಿಯೋಜನಾ ಮಂಜೂರಾತಿ ಕೋರಿ ಬರೆದ ಪತ್ರದ ಜೊತೆ ಯಾವ ಯಾವ ದಾಖಲಾತಿಗಳನ್ನು ಲಗತ್ತಿಸಿದ್ದೆ ಎಂದು ನನಗೆ ಜ್ಞಾಪಕ ಇಲ್ಲ. ಆ ಪತ್ರದೊಂದಿಗೆ ಕಳುಹಿಸಿದ್ದ ದಾಖಲಾತಿಗಳ ಪಟ್ಟಿಯನ್ನು ಮಾಡಿರುವುದಿಲ್ಲ. ಅಭಿಯೋಜನಾ ಮಂಜೂರಾತಿ ಪತ್ರದೊಂದಿಗೆ ಯಾವುದೇ ದಾಖಲಾತಿಗಳನ್ನು ನಾನು ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಕಳುಹಿಸಿರುವ ಬಗ್ಗೆ ನನ್ನ ಬಾಯಿ ಮಾತಿನ ಹೇಳಿಕೆ ಬಿಟ್ಟರೆ ಬೇರೆ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ಅಭಿಯೋಜನಾ ಮಂಜೂರಾತಿ ಕೋರಿ ನಾನು ಪತ್ರವನ್ನು ಅಪರ ಪೊಲೀಸ ಮಹಾನಿರ್ದೇಶಕರು, ಲೋಕಾಯುಕ್ತ ಬೆಂಗಳೂರುರವರಿಗೆ ಕಳುಹಿಸಿರುತ್ತೇನೆ. ವ್ಯವಸ್ಥಾಪನ ನಿರ್ದೇಶಕರು, ಧಾರವಾಡ ಹಾಲು ಉತ್ಪಾದಕರ ಸಹಕಾರ ಸಂಘ ರವರಿಂದ ಅಭಿಯೋಜನಾ ಮಂಜೂರಾತಿ ಪಡೆಯಬೇಕು ಎಂದು ನನ್ನ ಪತ್ರದಲ್ಲಿ ನಮೂದಿಸಿರುತ್ತೇನೆ. ಅಭಿಯೋಜನಾ ಮಂಜೂರಾತಿಯನ್ನು ನೇಮಕ ಮಾಡುವ ಮತ್ತು ಅಮಾನತು ಮಾಡಲು ಅಧಿಕಾರ ಹೊಂದಿರುವ ಅಧಿಕಾರಿ ಮಾತ್ರ ನೀಡಲು ಬರುತ್ತದೆ ಎಂದರೆ ಹೌದು. ಆದರೆ ಅಪರ ಪೊಲೀಸ ಮಹಾನಿರ್ದೇಶಕರು ಪರಿಶೀಲನೆ ಮಾಡಿ ಅವರೇ ಸಕ್ಷಮ ಪ್ರಾಧಿಕಾರಕ್ಕೆ ಅಭಿಯೋಜನಾ ಮಂಜೂರಾತಿ ಕೊಡಲು ಪತ್ರ ಬರೆಯುತ್ತಾರೆ. ನಾವು ನೇರವಾಗಿ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ಬರೆಯುವುದಿಲ್ಲ.

11. ದೋಸಾ-20/ಪ್ರಾಸಾ-17 ರವರಿಗೆ ಅಭಿಯೋಜನಾ ಮಂಜೂರಾತಿ ನೀಡುವ ಅಧಿಕಾರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ, ಕಾರಣ ಅಪರ ಪೊಲೀಸ ಮಹಾ ನಿರ್ದೇಶಕರು ಅವರಿಂದ ಅಭಿಯೋಜನಾ ಮಂಜೂರಾತಿ ನೀಡುವಂತೆ ಪತ್ರ ಕುಳಹಿಸಿರುತ್ತಾರೆ. ಅಭಿಯೋಜನಾ ಮಂಜೂರಾತಿ ನೀಡುವ ಪ್ರಾಧಿಕಾರ ಯಾವುದು ಎಂದು ನನಗೆ ಗೊತ್ತಿಲ್ಲದೇ ಇದ್ದ ಕಾರಣ ನಾನು ನನ್ನ ಮೇಲಾಧಿಕಾರಿ ಮೇಲೆ ಜವಾಬ್ದಾರಿ ಹಾಕಿ ತಪ್ಪಿಸಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಪ್ರಕರಣಗಳಲ್ಲಿ ಅಪರ ಪೊಲೀಸ ಮಹಾ ನಿರ್ದೇಶಕರಿಗೆ ಅಭಿಯೋಜನಾ ಮಂಜೂರಾತಿ ಕೊಡಿಸುವಂತೆ ಪತ್ರ ಬರೆಯಲಾಗುತ್ತದೆ. ಆ ರೀತಿ ಪದ್ದತಿ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪರ ಪೊಲೀಸ ಮಹಾ ನಿರ್ದೇಶಕರು ಅಭಿಯೋಜನಾ ಮಂಜೂರಾತಿ ನೀಡುವಂತೆ ಯಾರಿಗೆ ಪತ್ರ ಬರೆದಿದ್ದಾರೆ ಎಂದು ಈಗ ನನಗೆ

ಹೇಳಲು ಆಗುವುದಿಲ್ಲ. ದೋಸಾ–20 ರವರಿಗೆ ಅಭಿಯೋಜನಾ ಮಂಜೂರಾತಿ ನೀಡುವಂತೆ ಅಪರ ಪೊಲೀಸ ಮಹಾ ನಿರ್ದೇಶಕರು ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ನಿಜವಾದ ಅಭಿಯೋಜನಾ ಮಂಜೂರಾತಿ ಪ್ರಾಧಿಕಾರಕ್ಕೆ ಪತ್ರ ಬರೆದರೆ ಸತ್ಯ ಹೊರಬರುತ್ತದೆ ಎಂಬ ಕಾರಣಕ್ಕೆ ಅವರಿಗೆ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ.

12. ಪಿರ್ಯಾದುದಾರರ ಬಳಿ Android mobile ಇರಲಿಲ್ಲ ಎಂದರೆ ಸರಿಯಲ್ಲ. ನಾನು ತಪ್ಪು ಪ್ರಾಧಿಕಾರಕ್ಕೆ ಅಭಿಯೋಜನಾ ಮಂಜೂರಾತಿ ಕೋರಿ ತಪ್ಪು ಪ್ರಾಧಿಕಾರಿಯಿಂದ ಅಭಿಯೋಜನಾ ಮಂಜೂರಾತಿಯನ್ನು ಪಡೆದಿದ್ದೇನೆ ಎಂದರೆ ನಾನು ನೇರವಾಗಿ ಅಭಿಯೋಜನಾ ಪ್ರಾಧಿಕಾರಕ್ಕೆ ಪತ್ರ ಬರೆದಿಲ್ಲ.

**ಮರು ವಿಚಾರಣೆಃ ವಿ.ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.